ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	218 (261)
ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	09-12-2020
ಉತ್ತರಿಸುವವರು	ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಮುಜರಾಯಿ (ಧಾರ್ಮಿಕ ದತ್ತಿ) ವ್ಯಾಪ್ತಿಗೆ ಒಳಪಡುವ ಎಷ್ಟು ದೇವಾಲಯಗಳಿವೆ; ಇವುಗಳಲ್ಲಿ 'ಎ' ದರ್ಜೆಯ 'ಬಿ' ದರ್ಜೆ, 'ಸಿ' ದರ್ಜೆ ದೇವಾಲಯಗಳು ಯಾವುವು?</td><td>ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಟ್ಟಂತೆ ಒಟ್ಟು 34563 ಅಧಿಸೂಚಿತ ಸಂಸ್ಥೆಗಳಿವೆ. ಪ್ರವರ್ಗವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಪ್ರವರ್ಗ</th><th>ವಿವರ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>205</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ರೂ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>139</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34,219</td></tr>
<tr><td colspan="2">ಒಟ್ಟು</td><td>34,563</td></tr>
</table></td></tr>
<tr><td>ಆ)</td><td>ಇವುಗಳಲ್ಲಿ ಎ,ಬಿ.ಸಿ ದರ್ಜೆಗಳನ್ನು ಯಾವ ಮಾನದಂಡದಲ್ಲಿ ನಿರ್ಧರಿಸಲಾಗುವುದು (ವಿವರ ನೀಡುವುದು)</td><td>ಸದರಿ ಸಂಸ್ಥೆಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 3(1) ರಂತೆ ದೇವಾಲಯಗಳ ಆದಾಯಕ್ಕೆ ಅನುಗುಣವಾಗಿ ಪ್ರವರ್ಗ 'ಎ', 'ಬಿ' ಮತ್ತು 'ಸಿ' ಎಂದು ವರ್ಗೀಕರಿಸಿದೆ.

ಎ) ದೇವಾಲಯದ ವಾರ್ಷಿಕ ವರಮಾನ ರೂ.25.00ಲಕ್ಷಗಳಿಗಿಂತ ಹೆಚ್ಚಿರುವ ದೇವಾಲಯಗಳನ್ನು ಪ್ರವರ್ಗ-ಎ ದೇವಾಲಯಗಳೆಂದು
ಬಿ) ದೇವಾಲಯದ ವಾರ್ಷಿಕ ವರಮಾನ ರೂ.5.00ಲಕ್ಷ ಗಳಿಂದ 25.00ಲಕ್ಷ ರೂಗಳವರೆಗೆ ವರಮಾನ ಹೊಂದಿರುವ ದೇವಾಲಯಗಳನ್ನು ಪ್ರವರ್ಗ-ಬಿ ದೇವಾಲಯಗಳೆಂದು
ಸಿ) ದೇವಾಲಯದ ವಾರ್ಷಿಕ ವರಮಾನ ರೂ.5.00ಲಕ್ಷಗಳಿಗಿಂತ ಮೀರದ/ಕಡಿಮೆ ಇರುವ ದೇವಾಲಯಗಳನ್ನು ಪ್ರವರ್ಗ-ಸಿ ದೇವಾಲಯಗಳೆಂದು ವರ್ಗೀಕರಿಸಲಾಗಿದೆ.</td></tr>
</table>

.....2

ಇ)	ಸದರಿ ದೇವಾಲಯಗಳ ಅರ್ಚಕರಿಗೆ ಸರ್ಕಾರದಿಂದ ಎಷ್ಟು ವೇತನ ಪಾವತಿಯಾಗುತ್ತಿದೆ ಪ್ರಸಕ್ತ ಸಾಲಿನಲ್ಲಿ ಪಾವತಿಯಾದ ವೇತನವೆಷ್ಟು?	ಧಾರ್ಮಿಕ ದತ್ತಿ ಇಲಾಖೆಯ ದೇವಾಲಯಗಳಲ್ಲಿನ ಅರ್ಚಕರಿಗೆ ವೇತನ ನೀಡುವ ಸಂಬಂಧ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಾವಳಿಗಳು 2002ರ ನಿಯಮ 8 ಅನ್ನು ಮತ್ತಷ್ಟು ತಿದ್ದುಪಡಿ ಮಾಡಿ, ಸರ್ಕಾರದ ಆದೇಶ ಸಂಖ್ಯೆ: ಕಂಇ 54/ ಮುಸೇವಿ 2017 ದಿನಾಂಕ: 17-07-2019ರಂತೆ ಪರಿಷ್ಕೃತ ವೇತನ ಶ್ರೇಣಿಗಳನ್ನು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಆಯಾಯ ದೇವಾಲಯದ ಆದಾಯದಲ್ಲಿ ಸಿಬ್ಬಂದಿ ವೆಚ್ಚ ಶೇ.35ರಷ್ಟು ಮೀರದಂತೆ ನೌಕರರಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸಲಾಗುತ್ತಿದೆ.
ಈ)	ಪ್ರಸಕ್ತ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟ ಹಣವೆಷು :, ಹಾಗೂ ಖರ್ಚಾದ ಹಣ ಎಷ್ಟು?	ಪ್ರಸಕ್ತ ಸಾಲಿನಲ್ಲಿ ದೇವಾಲಯಗಳ ಜೀರ್ಣೋದ್ಧಾರ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ವಿವಿಧ ಯೋಜನೆಗಳಿಗೆ ಆಯವ್ಯಯದಲ್ಲಿ ಒಟ್ಟು ರೂ.**38336.00**ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಇದರಲ್ಲಿ ಈವರೆಗೆ ರೂ.**10810.80**ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಈ ಮೊತ್ತದಲ್ಲಿ ರೂ.**7425.41**ಲಕ್ಷಗಳ (2020 ನವೆಂಬರ್ ಅಂತ್ಯಕ್ಕೆ) ಹಣವು ಖರ್ಚಾಗಿರುತ್ತದೆ.

ಸಂಖ್ಯೆ: ಕಂಇ 172 ಮುಸಪ್ರ 2020

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ,
ಮೀನುಗಾರಿಕೆ ಹಾಗೂ ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು